## ಅರ್ಧ ಕೊಡಿ

ರಘುನಾಥರಾಯರು ಸರಪಂಚರು.
ಆರೋಗ್ಯ ಸಮಸ್ಯೆಯಿಂದಾಗಿ ಅವರು
ವೈದ್ಯರ ಬಳಿಗೆ ಹೋಗಿದ್ದರು.
'ನಿಮ್ಮ ಸಮಸ್ಯೆ ಏನು?' ಎಂದು
ವೈದ್ಯರು ಕೇಳಿದರು.
'ವೈದ್ಯರೇ, ತಲೆ ತಿರುಗಿದಂತೆ ಆಗುತ್ತದೆ.
ಕೈ ಕಾಲು ನಡುಗುತ್ತವೆ' ಎಂದರು
ರಘುನಾಥರಾಯರು.
'ನೀವು ಡ್ರಿಂಕ್ಸ್ ಮಾಡ್ತೀರಾ?' ಎಂದು
ವೈದ್ಯರು ಕೇಳಿದರು.
'ನಾನು ಮನೆಯಿಂದ ಗ್ಲಾಸ್ ತಂದಿಲ್ಲ.
ನಿಮ್ಮ ಗ್ಲಾಸಿನಲ್ಲಿಯೇ ಅರ್ಧ ಗ್ಲಾಸ್
ಕೊಡಿ ಸಾಕು!' ಎನ್ನಬೇಕೇ
ರಘುನಾಥರಾಯರು!

**ಶೋಭಾ ಪ್ರಮೋದ್**





## ಮಂಗಳಾರತಿ

ಅಂದು ಬಸ್ಯಾನ ಹೆಂಡತಿಯ
ಹುಟ್ಟು ಹಬ್ಬ. ಹೆಂಡತಿ
ದೇವಸ್ಥಾನದಲ್ಲಿ ಅರ್ಚನೆ
ಮಾಡಿಸಿಕೊಂಡು ಬರುವಂತೆ
ಆದೇಶಿಸಿದಳು. ಅದರಂತೆ ಬಸ್ಯಾ
ದೇವಸ್ಥಾನದಲ್ಲಿದ್ದ.
ಪೂಜಾರಿ: 'ಮಂಗಳಾರತಿ
ಯಾರ ಹೆಸರಿನಲ್ಲಿ ಮಾಡಲಿ?'
ಬಸ್ಯಾ: 'ನನ್ನ ಹೆಂಡತಿಯ
ಹೆಸರಿನಲ್ಲಿ ಮಾಡಿ.'
ಪೂಜಾರಿ: 'ಯಾಕೆ ನಿಮ್ಮ
ಹೆಸರಿನಲ್ಲಿ ಬೇಡವಾ ಸಾರ್?'
ಬಸ್ಯಾ: 'ಅಯ್ಯೋ ಬೇಡ,
ಈಗಾಗಲೇ ಮನೇಲಿ
ಮಾಡಿಸ್ಕೊಂಡು ಬಂದಿದ್ದೇನೆ!'

**ಲತಾ ಹೆಗಡೆ**